REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

# ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 23 । 9 ಸೆಪ್ಟೆಂಬರ್ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ
## ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪರಿಣಾಮಕಾರಿ ಆಡಳಿತಕ್ಕೆ ಆದ್ಯತೆ ನೀಡಲು ಸಹಕಾರ ಸಚಿವ ಲಕ್ಷ್ಮಣ ಸವದಿ ಸಲಹೆ

**ಬೆಂಗಳೂರು:** ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯು ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ದಿನಾಂಕ: 3.9.2026 ರಂದು ಸಹಕಾರ ಸಚಿವರಾದ ಲಕ್ಷ್ಮಣ ಸಂಗಪ್ಪ ಸವದಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.



ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಲಕ್ಷ್ಮಣ ಸವದಿ ಅವರು ರೈತರ ಸ್ವಾವಲಂಬಿ ಬದುಕಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪರಿಣಾಮಕಾರಿ ಬೆಳವಣಿಗೆಯ ಬೆನ್ನೆಲುಬಾಗಿ ರಾಜ್ಯದಲ್ಲಿ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ರೈತರಿಗೆ ಅಗತ್ಯವಿರುವ ಕೃಷಿ ಸಾಲ ನೀಡುವಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪಾತ್ರ ಪ್ರಮುಖವಾದುದಾಗಿದೆ.

ಬ್ಯಾಂಕುಗಳ ಪರಿಣಾಮಕಾರಿ ಆಡಳಿತದಲ್ಲಿ ಹಿರಿಯ ಸಹಕಾರಿಗಳು ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ, ಉತ್ತಮ ಆಡಳಿತಕ್ಕೆ ಆದ್ಯತೆ ನೀಡುವ ಮೂಲಕ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಬಲವರ್ಧನೆಗೆ ಶ್ರಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮುಂದುವರೆದು ಮಾತನಾಡಿದ ಅವರು, ರಾಜ್ಯದ ಸಹಕಾರ ಕ್ಷೇತ್ರದ ಪರಿಣಾಮಕಾರಿ ಬೆಳವಣಿಗೆಗೆ ಪೂರಕವಾಗಿ ಈಗಾಗಲೇ ಹಲವಾರು ತಿದ್ದುಪಡಿಗಳನ್ನು ತರಲಾಗಿದ್ದು, ಅವುಗಳ ನಿಯಮಗಳನ್ನು ಶೀಘ್ರದಲ್ಲಿಯೇ ರಚಿಸಲಾಗುವುದು ಎಂದು ತಿಳಿಸಿದರು.

ಗ್ರಾಮೀಣ ಭಾಗದ ಜನರಿಗೆ ಯಶಸ್ವಿನಿ ಆರೋಗ್ಯ ಯೋಜನೆ ವರದಾನವಾಗಿದ್ದು, ಈ ಯೋಜನೆಯಡಿ ಅತಿ ತುರ್ತಾಗಿ ಅಗತ್ಯವಿರುವ ಶಸ್ತ್ರಚಿಕಿತ್ಸೆಗಳನ್ನು ಒಳಪಡಿಸಿ, ಅಬಲವರ್ಗದವರಿಗೆ ನೆರವಾಗಬೇಕು. ಆದ್ದರಿಂದ ಯಶಸ್ವಿನಿ ಯೋಜನೆಯನ್ನು ಉನ್ನತ ದರ್ಜೆಗೇರಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಸಹಕಾರ ಇಲಾಖೆ ಕಾರ್ಯದರ್ಶಿ ಎಸ್.ಬಿ. ಶೆಟ್ಟೆಣ್ಣನವರ, ಸಹಕಾರ ಸಂಘಗಳ ನಿಬಂಧಕರಾದ ಡಾ। ವೆಂಕಟೇಶ್ ಎಂ.ವಿ., ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ ಬಿ.ಸಿ. ಸತೀಶ್, ಇಲಾಖೆಯ ಅಪರ ನಿಬಂಧಕರು, ಜಂಟಿ ನಿಬಂಧಕರು, ಉಪನಿಬಂಧಕರುಗಳು ಉಪಸ್ಥಿತರಿದ್ದರು.

## ಗದಗ ನಗರದ ಮರ್ಚಂಟ್ಸ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನೂತನ ಕಟ್ಟಡ, ಸಂಸ್ಥಾಪಕರ ಭವನ ಹಾಗೂ ಬ್ಯಾಂಕಿನ 2ನೇ ಶಾಖೆ ಉದ್ಘಾಟನೆ ಸಮಾರಂಭ
## ಜನಪರ ಆಶಯದಿಂದ ಕಟ್ಟಿದ ಬ್ಯಾಂಕಿನ ಸಾಧನೆ ಶ್ಲಾಘನೀಯ ಡಾ. ತೋಂಟದ ಸಿದ್ಧರಾಮ ಶ್ರೀಗಳ ಅಭಿಮತ

**ಗದಗ :** ಸಮಾಜದಲ್ಲಿ ನೊಂದವರಿಗೆ ನೆರವಾಗಬೇಕು, ಬಡವರಿಗೆ ಭರವಸೆಯಾಗಬೇಕು, ವ್ಯಾಪಾರಸ್ಥರಿಗೆ ನೆರವಾಗುವ ಉದ್ದೇಶದಿಂದ ಹಲವಾರು ದಶಕಗಳ ಹಿಂದೆ ಸ್ಥಾಪಿಸಲಾಗಿದ್ದು, ದಿ ಮರ್ಚಂಟ್ಸ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಕಾರ್ಯ ಅತ್ಯಂತ ಶ್ಲಾಘನೀಯ ಎಂದು ಜ. ಡಾ.ತೋಂಟದ ಸಿದ್ಧರಾಮ ಸ್ವಾಮಿಗಳು ಹೇಳಿದರು.

3ನೇ ಪುಟಕ್ಕೆ...




2 ಶ್ರೀ ಭೈರವೇಶ್ವರ ಸಹಕಾರ ಬ್ಯಾಂಕಿನ 41ನೇ ವಾರ್ಷಿಕ ಮಹಾಸಭೆ
4 ಎಂಸಿಸಿ ಬ್ಯಾಂಕಿಗೆ ಪ್ರತಿಷ್ಠಿತ ಸರ್ವತೋಮುಖ ಅಭಿವೃದ್ಧಿ ಸಾಧನಾ ಪ್ರಶಸ್ತಿ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಪ್ರತಿಷ್ಠಿತ ಉದ್ಯಮಿಯೊಬ್ಬರ ಬೃಹತ್ ಸಾಲಮನ್ನಾ ಮಾಡುವುದು ದೇಶದ ಆರ್ಥಿಕತೆಗೆ ಹಾನಿ ಉಂಟುಮಾಡುತ್ತದೆಯಲ್ಲವೆ?

ಇತ್ತೀಚಿನ ಮಾಹಿತಿ ಪ್ರಕಾರ ನಮ್ಮ ಬ್ಯಾಂಕುಗಳು ನಾನಾ ಉದ್ದೇಶಗಳಿಗಾಗಿ ನೀಡುವ ದೇಶಾದ್ಯಂತ ವಿತರಿಸುವ ಸಾಲದ ಮೊತ್ತ ರೂ. 220 ಲಕ್ಷ ಕೋಟಿ. ಅದರಲ್ಲಿ ಸಿಂಹ ಪಾಲು ಸಾಲಗಳನ್ನು ಕೇವಲ ಆರು ಸಾವಿರ ಉದ್ಯಮಿಗಳ ಪಾಲಾಗುತ್ತದೆ. ಇದರಲ್ಲಿ ಅಳಿಲು ಪಾಲು ಮಧ್ಯಮ ವರ್ಗ, ಗ್ರಾಮೀಣ ಕೃಷಿ ಇತ್ಯಾದಿ ವರ್ಗಗಳು ಪಡೆದುಕೊಳ್ಳುತ್ತವೆ.

ಇದರಲ್ಲಿ ಅಳಿಲು ವರ್ಗಕ್ಕೆ ನೀಡಲಾದ ಸಾಲ ಬಹುತೇಕ ಕಂತಿನ ರೂಪದಲ್ಲಿ ನಿರಂತರವಾಗಿ ಪಾವತಿಯಾಗುತ್ತದೆ, ತಿರುವಳಿಯಾಗುತ್ತದೆ. ಆದರೆ, ಈ ಕಾರ್ಪೊರೇಟ್ ಉದ್ಯಮಿಗಳು ಮಾಡಿರುವ ಅಪಾರ ಪ್ರಮಾಣದ ಸಾಲಗಳಲ್ಲಿ ಬಹುತೇಕ ಸಾಲಗಳು ತಿರುವಳಿಯಾಗದೆ ನಂತರ, ಯಾವುದೇ ಸದ್ದು ಗದ್ದಲವಿಲ್ಲದೆ ಹೇರ್‌ಕಟ್ ಹೆಸರಿನಲ್ಲಿ ಮನ್ನಾವಾಗುತ್ತದೆ.

ಇತ್ತೀಚಿನ ಪ್ರಕರಣವನ್ನು ಗಮನಿಸುವುದಾದರೆ; ದೇಶದ ಪ್ರತಿಷ್ಠಿತ ಉದ್ಯಮಿಯೊಬ್ಬರ ಒಟ್ಟು 22,006.57 ಕೋಟಿ ರೂಪಾಯಿಗಳ ಬೃಹತ್ ಸಾಲದ ಪೈಕಿ ಕೇವಲ ರೂ.6.5 ಕೋಟಿ ಪಾವತಿಸುವ ಮರುಪಾವತಿ ಯೋಜನೆಗೆ ರಾಷ್ಟ್ರೀಯ ಕಂಪನಿ ಕಾನೂನು ಮಂಡಳಿ, ಸಾಲದಾತ ಸಂಸ್ಥೆಗಳ ತೀವ್ರ ವಿರೋಧದ ನಡುವೆಯೂ ಅಂತಿಮ ಒಪ್ಪಿಗೆ ನೀಡಿರುವುದು ಆಶ್ಚರ್ಯಕರವಾಗಿದೆ. ಇದನ್ನು ಬ್ಯಾಂಕುಗಳ ಪರಿಭಾಷೆಯಲ್ಲಿ "ಹೇರ್‌ಕಟ್" ಎನ್ನುತ್ತಾರಂತೆ.

ಈ ರೀತಿಯಾದ "ಹೇರ್‌ಕಟ್" ದೇಶದ ಆರ್ಥಿಕತೆಗೆ ಹಾನಿ ಉಂಟುಮಾಡಿತ್ತದೆಯಲ್ಲವೆ? ಇಲ್ಲಿ "ಹೇರ್‌ಕಟ್" ಆಗುತ್ತಿರುವುದು, ಜನರು ಬ್ಯಾಂಕಿನಲ್ಲಿಟ್ಟ ಹಣ, ಜನರು ಕಷ್ಟಪಟ್ಟು ದುಡಿದ ಬೆವರಿನ ಹಣವಲ್ಲವೆ? ಇದರಿಂದ ದೇಶದ ಆರ್ಥಿಕ ಬೆಳವಣಿಗೆಗೆ ಯಾವುದೇ ಪ್ರಯೋಜನವಿಲ್ಲ ಎನ್ನುವುದನ್ನು ಅರಿಯಬೇಕಿದೆ.

ನಿಮಗೆ ನೆನಪು ಮಾಡ ಬಯಸುತ್ತೇನೆ; 2015ರಲ್ಲಿ ಅಂದಿನ ಆರ್‌ಬಿಐ ಗವರ್ನರ್ ರಘುರಾಮ್ ರಾಜನ್ ಅವರು, ಬ್ಯಾಂಕುಗಳಿಗೆ ವಂಚಿಸುವವರ ದೊಡ್ಡ ಪಟ್ಟಿಯನ್ನೇ ಪ್ರಧಾನಮಂತ್ರಿಗಳಿಗೆ ಸಲ್ಲಿಸಿದ್ದರು. ಆದರೆ, ಇಂದಿಗೂ ಪ್ರಧಾನಮಂತ್ರಿಗಳು ಅದರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿದ್ದರ ಬಗ್ಗೆ ವರದಿಗಳಿಲ್ಲ.

ಪ್ರಸ್ತುತ ದೇಶದ ಪ್ರಜ್ಞಾವಂತರು ಈಗ ಇದನ್ನು ಪ್ರಶ್ನಿಸುತ್ತಿದ್ದಾರೆ. ನನ್ನ ಆರ್ಥಿಕ ತಜ್ಞ ಮಿತ್ರರೊಬ್ಬರ ಲೆಕ್ಕಾಚಾರದ ಪ್ರಕಾರ; ಈ ಮೊತ್ತದಲ್ಲಿ ದೇಶದ ಯುವಜನತೆಗೆ ಉತ್ತಮ ಆದಾಯ ದೊರೆಯುವ ಉದ್ಯೋಗ ನೀಡಬಹುದಾಗಿತ್ತು ಹಾಗೂ ಮಹಿಳೆಯರಿಗೆ ದುಡುಮೆಗೆ ಅಗತ್ಯವಿರುವ ಆರ್ಥಿಕ ಸಹಾಯ ನೀಡಿದ್ದರೆ, ಅವರು ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗುತ್ತಿತ್ತು.

ಹಾಗೆಯೇ, ರೈತರ ಬಹುದಿನದ ಬೇಡಿಕೆಯಾದ ಸಾಲಮನ್ನಾ ಮಾಡುವ ಮೂಲಕ ಅಸಂಖ್ಯಾತ ಕೃಷಿಕರ ಬದುಕಿಗೆ ಆಸರೆಯಾಗಬಹುದಿತ್ತು. ಇಡೀ ದೇಶದ ಜನರಿಗೆ ಕೇವಲ ರೂ. 400ಕ್ಕೆ ಗ್ಯಾಸ್ ಸಿಲಿಂಡರ್ ನೀಡಬಹುದಿತ್ತು. ಸೇನೆಯ ಸಂಪೂರ್ಣ ವೆಚ್ಚವನ್ನು ಮೂರು ವರ್ಷಗಳವರೆಗೆ ಭರಿಸಬಹುದಿತ್ತು. ದಲಿತ, ಬುಡಕಟ್ಟು ಮತ್ತು ಹಿಂದುಳಿದ ವರ್ಗದವರಿಗೆ ಪದವಿವರೆಗೆ ಉಚಿತ ಶಿಕ್ಷಣ ನೀಡಬಹುದಿತ್ತು ಎನ್ನುತ್ತಾರೆ.

ದೇಶ ಆರ್ಥಿಕ ಪ್ರಗತಿ ಸಾಧಿಸಬೇಕಿದ್ದರೆ, ಆರ್ಥಿಕ ದುರ್ಬಲರ, ಶೋಷಿತ ವರ್ಗದ ಜನರ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಬೇಕಿದೆ. ಆಗ ಮಾತ್ರ ನಮ್ಮ ದೇಶವು ವಿಶ್ವದ ಆರ್ಥಿಕತೆಯ ಸೂಪರ್ ಪವರ್ ಶಕ್ತಿಯಾಗಿ ಹೊರ ಹೊಮ್ಮುತ್ತದೆ ಎನ್ನುವ ವಿಶ್ವಾಸ ನನ್ನದು.

▸▸ ಎಚ್.ಕೆ. ಪಾಟೀಲ

## ಶ್ರೀ ಭೈರವೇಶ್ವರ ಸಹಕಾರ ಬ್ಯಾಂಕಿನ 41ನೇ ವಾರ್ಷಿಕ ಮಹಾಸಭೆ



**ತುಮಕೂರು** : ಶ್ರೀ ಭೈರವೇಶ್ವರ ಸಹಕಾರ ಬ್ಯಾಂಕಿನ 41ನೇ ವಾರ್ಷಿಕ ಮಹಾಸಭೆಯು ದಿನಾಂಕ:23.08.2026ನೇ ಭಾನುವಾರದಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ. ಆರ್. ಚಿಕ್ಕರಂಗಣ್ಣ (ಸಿ.ಆರ್.ಗೌಡ)ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಕೆ. ನಟೇಶ್ ರವರು ಮತ್ತು ನಿರ್ದೇಶಕ ಮಂಡಳಿ ಸದಸ್ಯರಾದ ಶ್ರೀ ಬಿ ಟಿ ಲಕ್ಕೇಗೌಡರು, ಶ್ರೀ ಎಸ್. ನಾರಾಯಣಗೌಡರು, ಶ್ರೀ ವೈ. ಚಂದ್ರಶೇಖರ್‌ರವರು, ಶ್ರೀಮತಿ ರಂಗಮಣಿ ಕಾಮೇಶ್ ರವರು, ಶ್ರೀಮತಿ ಎಸ್. ಸೌಭಾಗ್ಯರವರು, ಶ್ರೀ ಸಿ.ಎಸ್. ದೇವರಾಜುರವರು, ಡಾ. ಟಿ.ಎಸ್. ವಿಜಯಕುಮಾರ್‌ರವರು, ಶ್ರೀ ಪಿ. ಶಾಮಣ್ಣರವರು, ಶ್ರೀ ಸಿ. ಕೃಷ್ಣಮೂರ್ತಿರವರು, ಶ್ರೀ ಟಿ. ರಾಮಯ್ಯನವರು ಮತ್ತು ಬ್ಯಾಂಕಿನ ಸಿಇಓ ಶ್ರೀ ತಿಮ್ಮೇಗೌಡರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು. ಈ ಸಂದರ್ಭದಲ್ಲಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು ಮತ್ತು ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿ ಇಲ್ಲದೆ ಮರುಪಾವತಿ ಮಾಡಿರುವ ಸದಸ್ಯರುಗಳಿಗೆ ಉತ್ತಮ ಗ್ರಾಹಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷರು ಸದಸ್ಯರನ್ನು ಉದ್ದೇಶಿಸಿ ಹೆಚ್ಚು ಹೆಚ್ಚು ಠೇವಣಿ ಮಾಡುವುದರ ಮೂಲಕ ಮತ್ತು ಸಾಲ ಪಡೆದ ಸದಸ್ಯರು ಸುಸ್ತಿ ಇಲ್ಲದೆ ಸಾಲವನ್ನು ಮರುಪಾವತಿ ಮಾಡಬೇಕೆಂದು ಬ್ಯಾಂಕಿನ ಅಭಿವೃದ್ಧಿಗೆ ಸದಸ್ಯರೆಲ್ಲರೂ ಕೈಗೂಡಿಸಬೇಕೆಂದು ಸದಸ್ಯರಲ್ಲಿ ಮನವಿ ಮಾಡಿದರು. ಬ್ಯಾಂಕಿನಲ್ಲಿ ಬೈಲಾ ತಿದ್ದುಪಡಿ ಮಾಡಿದ್ದು ಇನ್ನು ಮುಂದೆ ಬೇರೆ ಜಿಲ್ಲೆಗಳಲ್ಲೂ ಶಾಖೆಗಳನ್ನು ತೆರೆದು ಗ್ರಾಹಕರಿಗೆ ಉತ್ತಮ ಸೇವೆಯನ್ನು ಒದಗಿಸಲಾಗುವುದು ಎಂದು ಸಭೆಗೆ ತಿಳಿಸಿದರು.

# ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಜಿ.ಟಿ. ದೇವೇಗೌಡ, ಉಪಾಧ್ಯಕ್ಷರಾಗಿ ಬಿ.ಕೆ. ಶಿವಕುಮಾರ್ ಅವಿರೋಧ ಆಯ್ಕೆ





**ಬೆಂಗಳೂರು:** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಶಾಸಕರಾದ ಜಿ.ಟಿ. ದೇವೇಗೌಡರು ಹಾಗೂ ಉಪಾಧ್ಯಕ್ಷರಾಗಿ ಬಿ.ಕೆ. ಶಿವಕುಮಾರ್ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಯುತರುಗಳನ್ನು ರಾಷ್ಟ್ರೀಯ ಸಹಕಾರಿ ಯೂನಿಯನ್ ನಿರ್ದೇಶಕರು ಹಾಗೂ ಶಾಸಕರಾದ ಎಚ್.ಕೆ. ಪಾಟೀಲರವರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಹಕಾರ ಮಹಾಮಂಡಳದ ನೂತನ ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿ ಮುಖಂಡರುಗಳು ನೂತನ ಪದಾಧಿಕಾರಿಗಳನ್ನು ಸನ್ಮಾನಿಸಿ, ಅಭಿನಂದಿಸಿ ಗೌರವಿಸಿದರು.

...1ನೇ ಪುಟದಿಂದ

ಅವರು ಇಲ್ಲಿನ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ನಾಮಜೋಶಿ ರಸ್ತೆಯಲ್ಲಿರುವ ದಿ ಮರ್ಚಂಟ್ಸ್ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕಿನ ನೂತನ ಕಟ್ಟಡ, ಸಂಸ್ಥಾಪಕರ ಭವನ ಹಾಗೂ ಬ್ಯಾಂಕಿನ 2ನೇ ಶಾಖೆಯ ಉದ್ಘಾಟನೆಯ ನಂತರ ಜರುಗಿದ ಸಮಾರಂಭದಲ್ಲಿ ಆರ್ಶೀವಚನ ನೀಡಿ, ಉದಾತ್ತವಾದ ಆಶಯಗಳಿಂದ ಮುನ್ನಡೆದರೆ ಸಮಾಜಕ್ಕೆ ಹಾಗೂ ಜನತೆಗೆ ನೆರವಾಗುವುದು ಎಂಬುದಕ್ಕೆ ಈ ಬ್ಯಾಂಕಿನ ಬೆಳವಣಿಗೆಯೇ ಜೀವಂತ ಸಾಕ್ಷಿಯಾಗಿದೆ. ಈ ಹಿನ್ನಲೆಯಲ್ಲಿ ಹಿರಿಯರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಇಂದಿಗೂ ಸಹ ಬ್ಯಾಂಕು ಮುಂದುವರೆಯಿತ್ತಿರುವುದಕ್ಕೆ, ಅದು ಹೊಂದಿರುವ ಸಮಾಜಮುಖಿ ದೃಷ್ಟಿಕೋನವೇ ಕಾರಣ ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆ ನೇರವೇರಿಸಿದ ಮಾಜಿ ಸಚಿವರು, ಶಾಸಕರಾದ ಎಚ್.ಕೆ ಪಾಟೀಲರವರು ಮಾತನಾಡಿ, ಸಹಕಾರಿ ಸಂಘಗಳನ್ನು ಹತ್ತಿಕ್ಕಲು ಸದಾಕಾಲ ಪ್ರಯತ್ನಗಳು ನಡೆದಿವೆ. ಆದರೆ ಅವುಗಳು ಎಂದಿಗೂ ಸಫಲವಾಗಿಲ್ಲ. ದೇಶದಲ್ಲಿ ಸುಮಾರು 1457 ಅರ್ಬನ್ ಬ್ಯಾಂಕುಗಳು ಚಳುವಳಿಯ ರೂಪದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನಲೆಯಲ್ಲಿ ಸಣ್ಣ ಗ್ರಾಹಕರನ್ನು ಹೊಂದಿರುವ ಹಾಗೂ ಸಣ್ಣ ಬ್ಯಾಂಕುಗಳೆಂದೇ ಗುರುತಿಸಲ್ಪಡುವ ಅರ್ಬನ್ ಬ್ಯಾಂಕುಗಳು ಸಮಾಜ ಕಟ್ಟುವಲ್ಲಿ ಸಾಕಷ್ಟು ನೆರವಾಗಿವೆ ಎಂದರು. ರಾಜ್ಯ, ರಾಷ್ಟ್ರದ ಅರ್ಬನ್ ಬ್ಯಾಂಕ ವಲಯ ಸಲ್ಲಿಸುವ ಸೇವೆ ವಿಸ್ತಾರಗೊಳ್ಳಬೇಕಿದೆ ಎಂದು ಆಶಿಸಿದರು.

ಸಂಸ್ಥಾಪಕರ ಭಾವಚಿತ್ರವನ್ನು ಅನಾವರಣಗೊಳಿಸಿದ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ. ಸಂಕನೂರ ರವರು ಮಾತನಾಡಿ, ಬ್ಯಾಂಕಿನ ನೂತನ ಕಟ್ಟಡಕ್ಕೆ ಸಂಸ್ಥಾಪಕರ ಭವನ ಎಂದು ನಾಮಕರಣ ಮಾಡಿದ್ದು ಸಾರ್ಥಕ ಹಾಗೂ ಶ್ಲಾಘನೀಯವಾಗಿದೆ. ಅಂದು ಹಿರಿಯರು ಕಷ್ಟಪಟ್ಟು ಉದಾತ್ತ ಧ್ಯೇಯದೊಂದಿಗೆ ಪ್ರಾರಂಭಿಸಿದ ಈ ಬ್ಯಾಂಕು ಪ್ರತಿವರ್ಷವೂ ಸಹ ತನ್ನ ಬೆಳವಣಿಗೆಯ ವೇಗವನ್ನು ಹೆಚ್ಚಿಸುತ್ತಲೇ ನಡೆದಿದೆ. ಅದಕ್ಕೆ ಕಾರಣೀಕರ್ತರಾದ ಇಂದಿನ ಎಲ್ಲ ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿಗಳು ಅಭಿನಂದನಾರ್ಹರು ಎಂದು ಹೇಳಿದರು.

ಚಂದ್ರು ಬಾಳಿಹಳ್ಳಿಮಠ ರವರ ಧ್ವನಿಯೊಂದಿಗೆ ನಿರೂಪಿಸಿದ ದಿ ಮರ್ಚಂಟ್ಸ್ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕಿನ ಸಮಗ್ರ ಇತಿಹಾಸವನ್ನು ಸಾರುವ ಅಂದಿನ ಎಲ್ಲ ಹಿರಿಯರನ್ನು ಒಳಗೊಂಡ ಸಾಕ್ಷ್ಯಚಿತ್ರ ಜನರ ಮನ ಸೆಳೆಯಿತು.

ಅಧ್ಯಕ್ಷತೆಯನ್ನು ದಿ ಮರ್ಚಂಟ್ಸ್ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕಿನ ಅಧ್ಯಕ್ಷರಾದ ಖ್ಯಾತ ಚಾರ್ಟರ್ಡ್ ಅಕೌಂಟಂಟ್ ಆದ ಕೆ.ಎಸ್. ಚಟ್ಟಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್.ಜಿ. ಪಲ್ಲೇದ, ವಿಶ್ರಾಂತ ಜಿಲ್ಲಾ ನ್ಯಾಯಾಧೀಶರು ಮತ್ತು ಬಸವರಾಜ ಆರ್. ನಿಡಗುಂದಿಮಠ, ಸಹಕಾರ ಅಭಿವೃದ್ಧಿ ಅಧಿಕಾರಿ, ಗದಗ ಇವರು ಆಗಮಿಸಿದ್ದರು. ಕಟ್ಟಡ ಸಮಿತಿಯ ಮಹೇಶ ಎಸ್. ಕಂಪಗೌಡ್ರ ಹಾಗೂ ಸಚಿನ್ ಪಟ್ಟಣಶೆಟ್ಟಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಬ್ಯಾಂಕಿನ ಹಿರಿಯ ಸದಸ್ಯರಾದ ಮಹೇಶಗೌಡ ಪೋಲಿಸ್‌ಪಾಟೀಲ್, ಗುರುರಾಜ ಬಳಗಾನೂರ, ವಿಜಯ ಬಾಳಿಹಳ್ಳಿಮಠ, ಬಲವಂತ ಹಬೀಬ, ಮುರಗಯ್ಯ ವಸ್ತ್ರದ ಇವರನ್ನು ಸನ್ಮಾನಿಸಲಾಯಿತು, ಬ್ಯಾಂಕಿನ ಕಿರಿಯ ಸದಸ್ಯರಾಗಿ ಸದಸ್ಯತ್ವ ಪಡೆದುಕೊಂಡಿದ್ದ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ. ಜಯದೇವ ಬಾಳಿಹಳ್ಳಿಮಠ ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆ ಮೇಲೆ ಉಪಾಧ್ಯಕ್ಷರಾದ ಚಂದ್ರು ಬಾಳಿಹಳ್ಳಿಮಠ, ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀಯುತ ಸಚಿನ ಎಸ್. ಪಟ್ಟಣಶೆಟ್ಟಿ, ಶಾಂತೇಶ ಜಿ. ಅರಮನಿ, ಶಿವಕುಮಾರ ಆರ್. ಭೂಸನೂರಮಠ, ಮಹೇಶ ಎಸ್. ಕಂಪಗೌಡ್ರ, ಲಿಂಗರಾಜ ಬಿ. ತೋಟದ, ಸುನೀತಾ ಎಸ್. ತಡಸ, ಶಾಂತಾ ಎಸ್. ಹಲವಾಗಲಿ, ಶಂಕರಪ್ಪ ಬಿ. ಗಡಾದ, ಈರಣ್ಣ ಜಿ. ಮುದಗಲ್, ಅಶೋಕ ಎಸ್. ಹಂಜಗಿ, ಸಿಎ. ಮಹೇಶ್ವರಿ ಪಾಟೀಲ ಮಹೇಂದ್ರಕರ, ವ್ಯವಸ್ಥಾಪಕ ನಿರ್ದೇಶಕರಾದ ಬಸವರಾಜ ನಾಯಕವಾಡಿ, ವ್ಯವಸ್ಥಾಪಕರಾದ ಸಂತೋಷ ಎನ್. ಗಾಣಿಗೇರ ಮತ್ತು ಶಾಖಾಧಿಕಾರಿ ವಿಜಯಕಾಂತ ವಿ. ನರಗುಂದ ಉಪಸ್ಥಿತರಿದ್ದರು.

ಉಪಾಧ್ಯಕ್ಷರಾದ ಚಂದ್ರು ಬಾಳಿಹಳ್ಳಿಮಠ ರವರು ಮಾತನಾಡಿ, ಬ್ಯಾಂಕ್ ಬೆಳೆದು ಬಂದ ಯಶೋಗಾಥೆಯನ್ನು ವಿವರಿಸಿ, ಕಾರ್ಯಕ್ರಮ ನಿರೂಪಿಸಿದರು. ಬ್ಯಾಂಕಿನ ಅಧ್ಯಕ್ಷರಾದ ಸಿಎ. ಕೆ.ಎಸ್. ಚಟ್ಟಿ ಸ್ವಾಗತಿಸಿದರು, ಸಿಎ. ಮಹೇಶ್ವರಿ ಪಾಟೀಲ ಮಹೇಂದ್ರಕರ ವಂದಿಸಿದರು.

# ಎಂಸಿಸಿ ಬ್ಯಾಂಕಿಗೆ ಪ್ರತಿಷ್ಠಿತ ಸರ್ವತೋಮುಖ ಅಭಿವೃದ್ಧಿ ಸಾಧನಾ ಪ್ರಶಸ್ತಿ



**ಮಂಗಳೂರು** : ತನ್ನ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿಕೊಂಡಿರುವ ಎಂಸಿಸಿ ಬ್ಯಾಂಕ್ 2025–26ನೇ ಸಾಲಿನ ಪಟ್ಟಣ ಸಹಕಾರ ಬ್ಯಾಂಕ್ ವಿಭಾಗದಲ್ಲಿ ಅತ್ಯುತ್ತಮ ಸಾಧನೆಗಾಗಿ ಎಸ್‌ಸಿಡಿಸಿಸಿ ಬ್ಯಾಂಕಿನ ಪ್ರತಿಷ್ಠಿತ "ಸರ್ವತೋಮುಖ ಅಭಿವೃದ್ಧಿಗಾಗಿ ಸಾಧನಾ ಪ್ರಶಸ್ತಿ 2025–26"ಗೆ ಭಾಜನವಾಗಿದೆ.

ಈ ಗೌರವವು ಎಂಸಿಸಿ ಬ್ಯಾಂಕಿನ ಅತ್ಯುತ್ತಮ ಕಾರ್ಯಕ್ಷಮತೆ, ನಿರಂತರ ಬೆಳವಣಿಗೆ ಹಾಗೂ ಶ್ರೇಷ್ಠತೆಯ ಬದ್ಧತೆಗೆ ಸಂದ ಗೌರವವಾಗಿದೆ. 2025–26ನೇ ಹಣಕಾಸು ವರ್ಷದಲ್ಲಿ ವ್ಯವಹಾರ ವಹಿವಾಟಿನಲ್ಲಿ ದಾಖಲಿಸಿದ ಸರ್ವತೋಮುಖ ಪ್ರಗತಿ, ಗಮನಾರ್ಹ ಬೆಳವಣಿಗೆ, ಸ್ಥಿರವಾದ ಆರ್ಥಿಕ ಸಾಧನೆ, ಕಾರ್ಯಾಚರಣೆಯ ಶ್ರೇಷ್ಠತೆ ಮತ್ತು ಸಮರ್ಪಿತ ಗ್ರಾಹಕ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಪ್ರಶಸ್ತಿ ಪ್ರಧಾನ ಸಮಾರಂಭವು ದಿನಾಂಕ 22 ಆಗಸ್ಟ್ 2026ರಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ (ಎಸ್‌ಸಿಡಿಸಿಸಿ) ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಸಹಕಾರ ಚಳವಳಿಯ ಗಣ್ಯ ನಾಯಕರ ಸಮ್ಮುಖದಲ್ಲಿ ನಡೆಯಿತು. ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಎಸ್‌ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರು ಪ್ರಧಾನ ಮಾಡಿದರು. ಎಂಸಿಸಿ ಬ್ಯಾಂಕ್ ಪರವಾಗಿ ಬ್ಯಾಂಕಿನ ಉಪಾಧ್ಯಕ್ಷರು, ಪ್ರಧಾನ ವ್ಯವಸ್ಥಾಪಕರು, ನಿರ್ದೇಶಕರು ಮತ್ತು ಉಪ ಪ್ರಧಾನ ವ್ಯವಸ್ಥಾಪಕರು ಪ್ರಶಸ್ತಿಯನ್ನು ಸ್ವೀಕರಿಸಿದರು.

# ಹೊನ್ನಾವರ ಅರ್ಬನ್ ಬ್ಯಾಂಕ್ : 107ನೇ ವಾರ್ಷಿಕ ಮಹಾಸಭೆ




ದಿನಾಂಕ : 23–08–2026 ರಂದು ಹೊನ್ನಾವರ ನಗರ ಸಹಕಾರಿ ಬ್ಯಾಂಕಿನ 107ನೇ ವಾರ್ಷಿಕ ಸರ್ವಸಾಧಾರಣ ಸಭೆಯು ನ್ಯೂ ಇಂಗ್ಲೀಷ ಸ್ಕೂಲ್, ಹೊನ್ನಾವರ ಆವರಣದಲ್ಲಿ ಜರುಗಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಘವ ವಿಷ್ಣು ಬಾಳೇರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

1919ರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿರುವ ಪ್ರತಿಷ್ಠಿತ ದಿ ಹೊನ್ನಾವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೊನ್ನಾವರ 2025–26 ನೇ ಸಾಲಿನಲ್ಲಿ ರೂ.1 ಕೋಟಿ 60 ಲಕ್ಷ ನಿರ್ವಹಣಾ ಲಾಭ ಗಳಿಸಿದ್ದು, ಸರಕಾರಕ್ಕೆ ಆದಾಯ ತೆರಿಗೆ ಪಾವತಿಸುವ ಬಗ್ಗೆ ಅನುವು ಮಾಡಿದ ನಂತರ ರೂ.1 ಕೋಟಿ 25ಲಕ್ಷ ನಿಕ್ಕಿ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಶ್ರೀ ರಾಘವ ವಿಷ್ಣು ಬಾಳೇರಿಯವರು ವಾರ್ಷಿಕ ಸರ್ವಸದಸ್ಯರ ಸಾಧಾರಣ ಸಭೆಯಲ್ಲಿ ತಿಳಿಸಿದರು.

ಬ್ಯಾಂಕಿನ ಠೇವು ಸಂಗ್ರಹಣೆ ರೂ.257.82 ಕೋಟಿ ತಲುಪಿದ್ದು, ಸಾಲ–ಮುಂಗಡಗಳು ರೂ.177.13 ಕೋಟಿಗಳಿಗೆ ತಲುಪಿವೆ. ಶೇರು ಭಂಡವಾಳ ಮತ್ತು ಸ್ವಂತ ನಿಧಿಗಳು ರೂ.31.15 ಕೋಟಿಗಳಾಗಿದ್ದು, ಒಟ್ಟು ದುಡಿಯುವ ಬಂಡವಾಳ ರೂ.292.03 ಕೋಟಿಗಳಿಗೆ ಏರಿಕೆಯಾಗಿದೆ. ಒಟ್ಟು ರೂ.97.65 ಕೋಟಿ ಹಣವನ್ನು ಬ್ಯಾಂಕು ಕೇಂದ್ರ ಸರ್ಕಾರದ ಸಾಲಪತ್ರಗಳಲ್ಲಿ, Non-SLR ಬಾಂಡ್‌ಗಳಲ್ಲಿ ಹಾಗೂ ವಿವಿಧ ಬ್ಯಾಂಕುಗಳಲ್ಲಿ ಗುಂತಾಯಿಸಿರುವುದು ಬ್ಯಾಂಕಿನ ಆರ್ಥಿಕ ಸ್ಥಿರತೆಯನ್ನು ದೃಢೀಕರಿಸಿದೆ. ಬ್ಯಾಂಕು ಪ್ರಸಕ್ತ ಸಾಲಿನಲ್ಲಿ ರೂ.434.95 ಕೋಟಿ ಒಟ್ಟು ವ್ಯವಹಾರವನ್ನು ನಡೆಸಿದೆ. ಬ್ಯಾಂಕಿನ CRAR 12.86 ಇದ್ದು, ಇದು ಬ್ಯಾಂಕಿನ ಆರ್ಥಿಕ ಸುಭದ್ರತೆಯ ಸಂಕೇತವಾಗಿದೆ. ಒಟ್ಟು 26691 ಶೇರು ಸದಸ್ಯರನ್ನು ಹೊಂದಿರುವ ಬ್ಯಾಂಕು ರೂ.7.89 ಕೋಟಿಗಳಿಗೆ ಶೇರು ಬಂಡವಾಳ ವೃದ್ಧಿಸಿಕೊಂಡಿದೆ. ಬ್ಯಾಂಕು ಲೆಕ್ಕಪರಿಶೋಧನೆಯಲ್ಲಿ 'ಅ' ವರ್ಗದಲ್ಲಿ ಮುಂದುವರೆದಿದೆ. ಬ್ಯಾಂಕಿನ ಸಾಲ ವಸೂಲಾತಿ ಪ್ರಮಾಣ 96.07% ಇರುತ್ತದೆ ಎಂದು ತಿಳಿಸಲು ಹರ್ಷವೆನಿಸುತ್ತದೆ ಎಂದು ಅವರು ತಿಳಿಸಿದ್ದಾರೆ. ಬ್ಯಾಂಕು ಪ್ರಸಕ್ತ ಸಾಲಿನ ಬಗ್ಗೆ ಶೇರು ಸದಸ್ಯರಿಗೆ 8% ಡಿವಿಡೆಂಡ್ ಘೋಷಿಸಿದೆ. ಬ್ಯಾಂಕು ಸಮಾಜಮುಖಿಯಾಗಿ ತನ್ನ ಕಾರ್ಯನಿರ್ವಹಿಸುತ್ತಿದೆ. ಪ್ರತಿ ವರ್ಷ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸುತ್ತಿದ್ದು, ಶಿಕ್ಷಣ, ಕ್ರೀಡೆ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ ಜಿಲ್ಲೆಯ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಪರಿಪಾಠ ಹಾಕಿಕೊಂಡಿದೆ. ಬ್ಯಾಂಕು ತನ್ನ ಸಂಸ್ಥಾಪಕರಾದ ದಿ.ಎಮ್. ಎ. ಕಿಣಿ ಹಾಗೂ ದಿ. ಎಲ್. ಕೆ. ಶ್ಯಾನಭಾಗ ಶ್ರೋಫ್‌ರವರ ಸ್ಮರಣಾರ್ಥ ನಿರ್ಮಿಸಿರುವ ಸಭಾ ಭವನವನ್ನು ಸಹಕಾರಿ ವಲಯದ ತರಬೇತಿ ಕಾರ್ಯಕ್ರಮಗಳಿಗೆ ಉಚಿತವಾಗಿ ನೀಡುತ್ತಿದೆ. ಜನತೆಗೆ ಶುದ್ಧ ಕುಡಿಯುವ ನೀರನ್ನು ಪೂರೈಸಿ ಜನತೆಯ ಅಗತ್ಯಕ್ಕೆ ಸ್ಪಂದಿಸಿ ತನ್ನ ಸಾಮಾಜಿಕ ಬದ್ಧತೆಯನ್ನು ನಿರ್ವಹಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರು ತಿಳಿಸಿದ್ದಾರೆ.

## ದಿನಾಂಕ: 16.09.2026ರಂದು ಮಹಾಮಂಡಳದ 61ನೇ ವಾರ್ಷಿಕ ಮಹಾಸಭೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 2025–26ನೇ ಸಾಲಿನ 61ನೇ ವಾರ್ಷಿಕ ಮಹಾಸಭೆಯನ್ನು 16ನೇ ಸೆಪ್ಟೆಂಬರ್ 2026ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಮಹಾಮಂಡಳದ ದಿ॥ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್.ರಸ್ತೆ, ಬೆಂಗಳೂರು – 560027 ಇಲ್ಲಿ ಏರ್ಪಡಿಸಲಾಗಿದೆ. ಸಭೆಗೆ ಮಹಾಮಂಡಳದ ಸದಸ್ಯ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಬೇಕಾಗಿ ವಿನಂತಿ. ಒಂದು ಸದಸ್ಯ ಬ್ಯಾಂಕಿನಿಂದ ಒಬ್ಬ ಪ್ರತಿನಿಧಿಗೆ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

## ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ : 32ನೇ ವಾರ್ಷಿಕ ಮಹಾಸಭೆ




**ಮಂಗಳೂರು :** ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ (ನಿ) ಮಂಗಳೂರು ಇದರ 2025–26ನೇ ಸಾಲಿನ 32ನೇ ವಾರ್ಷಿಕ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷೆ ಶ್ರೀಮತಿ ಭಾರತಿ ಜಿ. ಭಟ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ : 23–08–2026ನೇ ಆದಿತ್ಯವಾರ ಮಂಗಳೂರಿನ ಶ್ರೀ ರಾಧಕೃಷ್ಣ ದೇವಸ್ಥಾನದ ಬಾಲಂಭಟ್ ಹಾಲ್‌ನಲ್ಲಿ ಜರುಗಿತು. ವರ್ಷಾಂತ್ಯಕ್ಕೆ ಬ್ಯಾಂಕ್ ಒಟ್ಟು ರೂ. 182.51 ಲಕ್ಷ ಪಾಲು ಬಂಡವಾಳ, ರೂ. 304.90 ಲಕ್ಷ ಕ್ಷೇಮ ನಿಧಿ ಹಾಗೂ ಇತರ ನಿಧಿಗಳನ್ನು ಹೊಂದಿದೆ.

ಬ್ಯಾಂಕ್ ಒಟ್ಟು ರೂ. 3617.34 ಲಕ್ಷ ಠೇವಣಿಯನ್ನು ಹೊಂದಿದ್ದು, ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ರೂ. 2212.21 ಲಕ್ಷ ಸಾಲ ನೀಡಲಾಗಿದೆ. ವರದಿ ವರ್ಷದಲ್ಲಿ ರೂ. 30,84,012.38 ಲಾಭ ಗಳಿಸಿರುತ್ತದೆ. ಕೇಂದ್ರ ಸರ್ಕಾರದ ಕಾನೂನಿನಂತೆ ರೂ. 7,24,758.46ನ್ನು ಆದಾಯ ತೆರಿಗೆಗಾಗಿ ಕಾಯ್ದಿರಿಸಿ ರೂ. 23,59,253.92 ನಿವ್ವಳ ಲಾಭ ಗಳಿಸಿದ್ದು ಶೇ. 9 ಡಿವಿಡೆಂಡ್ ಘೋಷಿಸಲಾಯಿತು. ಬ್ಯಾಂಕಿನ ಅಧ್ಯಕ್ಷೆ ಶ್ರೀಮತಿ ಭಾರತಿ ಜಿ. ಭಟ್ ಅವರು ಸಭೆಗೆ ಬಂದವರನ್ನು ಸ್ವಾಗತಿಸಿದರು ಮತ್ತು ವಾರ್ಷಿಕ ವರದಿಯನ್ನು ಸಭೆಗೆ ಮಂಡಿಸಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಪ್ರತಿಭಾ ಶೆಟ್ಟಿಯವರು ಲಾಭ ವಿಂಗಡನೆ, ಲೆಕ್ಕ ಪರಿಶೋಧಿತ ಆರ್ಥಿಕ ತಃಖ್ತೆ ಹಾಗೂ ಬಜೆಟ್‌ನ್ನು ಸಭೆಗೆ ನೀಡಿದರು.

ಬ್ಯಾಂಕಿನ ನಿರ್ದೇಶಕಿಯರಾದ ಸುಜೀತಾ ವಿ. ಬಂಗೇರ, ಕೆ.ಪಿ. ಪದ್ಮಾವತಿ, ಶೈಲಜಾ ವಿ ಕರ್ಕೇರ, ಶಾರಿಕ ಟಿ. ರೈ, ಚಂದ್ರಾಕ್ಷಿ ಜೆ ರೈ, ಶಾಂತ ಪಿ. ಭಟ್, ಸೌಮ್ಯತಾ ಬಿ.ಎಸ್., ಯಮುನಾ ಎ. ಕಾವಾ, ಪ್ರಫುಲ್ಲ ಟಿ., ವೃತ್ತಿಪರ ನಿರ್ದೇಶಕಿಯರಾದ ಸಿಎ ವೃಂದಾ ಕೊನ್ನಾರ್ ಇವರು ಉಪಸ್ಥಿತರಿದ್ದರು. ಬ್ಯಾಂಕಿನ ನಿರ್ದೇಶಕಿಯಾದ ಸುಜೀತಾ ವಿ. ಬಂಗೇರ ಇವರು ವಂದಿಸಿದರು. ಸಿಎ ವೃಂದಾ ಕೊನ್ನಾರ್ ಇವರು ಕಾರ್ಯಕ್ರಮ ನಿರೂಪಿಸಿದರು.



## ಪುತ್ತೂರು ಟೌನ್ ಬ್ಯಾಂಕಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವಿಶೇಷ ಸಾಧನಾ ಪ್ರಶಸ್ತಿ



**ಪುತ್ತೂರು:** ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ಸಾಧಿಸಿರುವ ಅಭೂತಪೂರ್ವ ಹಾಗೂ ಸರ್ವತೋಮುಖ ಸಾಧನೆಯನ್ನು ಗುರುತಿಸಿ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ವತಿಯಿಂದ 2025-26ನೇ ಸಾಲಿನ "ವಿಶೇಷ ಸಾಧನಾ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಪಟ್ಟಣ ಸಹಕಾರಿ ಬ್ಯಾಂಕ್ ವಿಭಾಗದಲ್ಲಿ ಬ್ಯಾಂಕಿನ ಉತ್ತಮ ಕಾರ್ಯನಿರ್ವಹಣೆ, ಪ್ರಗತಿ ಹಾಗೂ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ನೀಡುತ್ತಿರುವ ಗಮನಾರ್ಹ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಮಹಾಸಭೆಯ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ. ಶೇಖರ ಶೆಟ್ಟಿ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು. ಪುತ್ತೂರು ಟೌನ್ ಬ್ಯಾಂಕಿನ ಉಪಾಧ್ಯಕ್ಷ ಶ್ರೀಧರ ಗೌಡ, ಹಿರಿಯ ನಿರ್ದೇಶಕರಾದ ಚಂದ್ರಶೇಖರ ರಾವ್ ಬಪ್ಪಳಿಗೆ ಮತ್ತು ಕಿರಣ್ ಕುಮಾರ್ ರೈ ಉಪಸ್ಥಿತರಿದ್ದರು

ಸಮಾರಂಭದಲ್ಲಿ ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕರಾದ ಎಚ್.ಎನ್. ರಮೇಶ್, ಸಹಕಾರಿ ಯೂನಿಯನ್ ಅಧ್ಯಕ್ಷ ಹಾಗೂ ಬ್ಯಾಂಕಿನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ಸೇರಿದಂತೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಎಲ್ಲಾ ನಿರ್ದೇಶಕರು ಪ್ರಶಸ್ತಿ ಪ್ರಧಾನ ನೆರವೇರಿಸಿದರು.

ಬ್ಯಾಂಕಿನ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಪ್ರಶಸ್ತಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರು ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿಯೂ ಬ್ಯಾಂಕಿನ ಪ್ರಗತಿ ಹಾಗೂ ಗ್ರಾಹಕರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸಂಕಲ್ಪ ವ್ಯಕ್ತಪಡಿಸಿದರು.

## ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ 114ನೇ ವಾರ್ಷಿಕ ಸಾಮಾನ್ಯ ಮಹಾಸಭೆಯಲ್ಲಿ ಶ್ರೀ ಎಮ್. ಹರಿಶ್ಚಂದ್ರರವರಿಗೆ ಸನ್ಮಾನ



**ಉಡುಪಿ** : ಉಡುಪಿ ಕುಂಜಿಬೆಟ್ಟಿನಲ್ಲಿರುವ ಶಾರದಾ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ನಡೆದ ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ 114ನೇ ವಾರ್ಷಿಕ ಸಾಮಾನ್ಯ ಮಹಾಸಭೆಯಲ್ಲಿ ಮಾನವತೆಯ ಸೇವೆಯನ್ನು ಪರಮ ಧ್ಯೇಯವಾಗಿರಿಸಿಕೊಂಡು ಕರುಣೆ, ಸಮರ್ಪಣೆ ಮತ್ತು ಉತ್ಕೃಷ್ಟತೆಯೊಂದಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಅನನ್ಯ ಸೇವೆ ಹಾಗೂ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ, ಆರ್ಥಿಕ ನೆರವು, ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ಪರಿಹಾರ ಕಾರ್ಯ, ಪರಿಸರ ಸಂರಕ್ಷಣೆ, ಗೋ ಸಂರಕ್ಷಣೆ, ವಿಶೇಷ ಚೇತನರ ಕಲ್ಯಾಣ, ವೃದ್ಧಾಶ್ರಮ ಹಾಗೂ ಅನಾಥಾಶ್ರಮಗಳಿಗೆ ನೆರವು ಸೇರಿದಂತೆ ವಿವಿಧ ಸಾಮಾಜಿಕ ಸೇವಾ ಕ್ಷೇತ್ರಗಳಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಪರಿಗಣಿಸಿ ಬ್ಯಾಂಕಿನ ಶ್ರೇಷ್ಠ ಗ್ರಾಹಕರಾಗಿ ಗುರುತಿಸಿಕೊಂಡಿರುವ ಉಡುಪಿ ಗಾಂಧಿ ಆಸ್ಪತ್ರೆಯ ಆಡಳಿತ ನಿರ್ದೇಶಕರಾದ ಸಮಾಜಮುಖಿ ಚಿಂತನೆಯ ಶ್ರೀ ಎಮ್. ಹರಿಶ್ಚಂದ್ರರವರನ್ನು ಬ್ಯಾಂಕಿನ ಆಡಳಿತ ಮಂಡಳಿಯವರು ಅಭಿನಂದನಾ ಪತ್ರ ನೀಡಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಎಮ್. ಹರಿಶ್ಚಂದ್ರರವರು ಬ್ಯಾಂಕಿನ ಸಾಧನೆ ಹಾಗೂ ತ್ವರಿತಗತಿಯ ಸೇವೆಯನ್ನು ಶ್ಲಾಘಿಸಿದರು. ಈ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್.ಜಯಪ್ರಕಾಶ್ ಕೆದ್ಲಾಯ, ಉಪಾಧ್ಯಕ್ಷರಾದ ಶ್ರೀ ಪಿ. ರಾಘವೇಂದ್ರ ಭಟ್, ನಿರ್ದೇಶಕರುಗಳಾದ ಶ್ರೀ ಪಿ.ಎನ್. ರವೀಂದ್ರ ರಾವ್, ಶ್ರೀ ಕೆ. ಮುರಳೀಧರ ಭಟ್, ಶ್ರೀ ಎನ್. ಪ್ರಹ್ಲಾದ್ ಬಲ್ಲಾಳ್, ಶ್ರೀ ಸೂರ್ಯಪ್ರಕಾಶ್ ರಾವ್ ಎನ್., ಶ್ರೀ ಭಾಸ್ಕರ ರಾವ್ ಕಿದಿಯೂರು, ಶ್ರೀ ಸೀತಾರಾಮ ಕೇಕುಡ, ಶ್ರೀ ಜಯಪ್ರಕಾಶ ಭಂಡಾರಿ, ಶ್ರೀ ದೇವದಾಸ್, ಶ್ರೀಮತಿ ರೂಪಾ ಮೋಹನ್ ಹಾಗೂ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನ (BOM) ಸದಸ್ಯರಾದ ಶ್ರೀ ಚಂದ್ರಶೇಖರ ನಾವಡ, ಶ್ರೀ ವೆಂಕಟೇಶ ಮಿತ್ತಾಂತಾಯ ಹಾಗೂ CA ಶ್ರೀಕೃಷ್ಣ ಎಲ್. ಆಚಾರ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯ ಮತ್ತು ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ಉಪಸ್ಥಿತರಿದ್ದರು.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



**ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಒಬ್ಬ ವ್ಯಕ್ತಿ ಬ್ಯಾಂಕಿನ ಕಾರ್ಯ ವ್ಯಾಪ್ತಿಯ ವಿಳಾಸದಲ್ಲಿ ಬ್ಯಾಂಕಿನ ಸದಸ್ಯತ್ವವನ್ನು ಹೊಂದಿದ್ದಾರೆ. ಅವರು ಬ್ಯಾಂಕಿನ ಕಾರ್ಯವ್ಯಾಪ್ತಿಯ ಹೊರಗೆ ಆಸ್ತಿಯನ್ನು ಹೊಂದಿದ್ದು, ಆ ಆಸ್ತಿಯ ಮೇಲೆ ಸಾಲವನ್ನು ಕೇಳುತ್ತಿದ್ದಾರೆ. ಅವರಿಗೆ ಸಾಲವನ್ನು ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಶಿವಮೊಗ್ಗ ಜಿಲ್ಲೆ.**

**ಉತ್ತರ:** ಬ್ಯಾಂಕಿನ ಕಾರ್ಯ ವ್ಯಾಪ್ತಿ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿ ಮಾತ್ರ ಬ್ಯಾಂಕಿನ ಸದಸ್ಯರಾಗಲು ಅರ್ಹರಾಗಿರುತ್ತಾರೆ. ಭದ್ರತೆಯಾಗಿ ನೀಡಲಾದ ಆಸ್ತಿಯು ಕಾರ್ಯವ್ಯಾಪ್ತಿ ಪ್ರದೇಶದ ಹೊರಗೆ ಇದ್ದರೂ ಸಹ ಸದಸ್ಯರು ಸಾಲವನ್ನು ಪಡೆಯಬಹುದು. ಆದಾಗ್ಯೂ, ಸಾಲದ ಬಾಕಿ ಇರುವ ಸಮಯದಲ್ಲಿ ಸದರಿ ಆಸ್ತಿಯನ್ನು ಪರಿಶೀಲಿಸಲು, ಅಡಮಾನವನ್ನು ನೋಂದಾಯಿಸಲು ಮತ್ತು ಅಗತ್ಯವಿದ್ದರೆ ಆಸ್ತಿಯನ್ನು ಮಾರಾಟ ಮಾಡಲು ಸಾಧ್ಯವಾಗುತ್ತದೆ ಎಂದು ಬ್ಯಾಂಕು ಸಂಪೂರ್ಣವಾಗಿ ತೃಪ್ತವಾಗಿರಬೇಕು.

**02. ದಿನಾಂಕ: ಜೂನ್ 25, 2025ರಂದು ರಿಜರ್ವ್ ಬ್ಯಾಂಕು ಪಟ್ಟಣ ಸಹಕಾರ ಬ್ಯಾಂಕುಗಳು ನೀಡಬಹುದಾದ ಚಿನ್ನದ ಸಾಲದ ಬಗ್ಗೆ ಹೊಸ ಸುತ್ತೋಲೆಯನ್ನು ಬಿಡುಗಡೆ ಮಾಡಿತ್ತು. ಅದರಂತೆ, ಬ್ಯಾಂಕುಗಳು ಕೇವಲ 15% ಮಾರ್ಜಿನ್ (LTV) ಪಡೆದುಕೊಂಡು ಸಾಲ ನೀಡಬಹುದಾಗಿದೆ. ನಮ್ಮ ಬ್ಯಾಂಕು 30% ರಷ್ಟು ಮಾರ್ಜಿನ್ ಪಡೆಯುತ್ತಿದ್ದು, ಇನ್ನು ಮುಂದೆ ಈ ಮಾರ್ಜಿನ್‌ನ್ನು ಶೇ.25ಕ್ಕೆ ಇಳಿಸಲು ಯೋಚಿಸುತ್ತಿದ್ದೇವೆ. ಅಂದರೆ ರೂ.100 ಮೌಲ್ಯದ ಚಿನ್ನದ ಮೇಲೆ ರೂ.75ರಷ್ಟು ಸಾಲವನ್ನು ನೀಡಬಯಸುತ್ತೇವೆ. ಈ ರೀತಿ ಮಾಡಬಹುದೇ? ರಿಜರ್ವ್ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಜೂನ್ 25, 2025ರ ಸುತ್ತೋಲೆಯನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ತೋರಿಸಲಾಗಿದೆ. ಈ ಸುತ್ತೋಲೆಯ ಮಾರ್ಗಸೂಚಿಯನ್ನು ಬೇರೆ ಯಾವ ಸುತ್ತೋಲೆಯಲ್ಲಿ ಸೇರಿಸಲಾಗಿದೆ? ಈ ಬಗ್ಗೆ ಮಾಹಿತಿ ನೀಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ.**

**ಉತ್ತರ:** ಚಿನ್ನದ ಸಾಲಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ (ಪಟ್ಟಣ ಸಹಕಾರ ಬ್ಯಾಂಕುಗಳು – ಕ್ರೆಡಿಟ್ ಸೌಲಭ್ಯಗಳು) ನಿರ್ದೇಶನದ ಅಧ್ಯಾಯ IV ರಲ್ಲಿ ಸೇರಿಸಲಾಗಿದೆ. ರಿಜರ್ವ್ ಬ್ಯಾಂಕಿನ ನಿರ್ದೇಶನಗಳಲ್ಲಿ ಸೂಚಿಸಲಾದ ಮಾರ್ಜಿನ್ (LTV) ಸಾಲಗಳ ಗಾತ್ರಗಳಿಗೆ ಅನುಗುಣವಾಗಿ ಬದಲಾಗುತ್ತವೆ. ರೂಪಾಯಿ 2.50ಲಕ್ಷ ಮತ್ತು ಕಡಿಮೆ ಇರುವ ಬಳಕೆ ಸಾಲಕ್ಕೆ ಗರಿಷ್ಠ ಮೌಲ್ಯ ಅನುಪಾತಕ್ಕೆ ಸಾಲ 85%. LTV ಮಿತಿಯನ್ನು ಉಲ್ಲಂಘಿಸಿದ ತಕ್ಷಣ ಬ್ಯಾಂಕು ಸಾಲವನ್ನು ಹಿಂಪಡೆಯಬೇಕು. ಅದಲ್ಲದೆ, ಚಿನ್ನದ ಬೆಲೆಯಲ್ಲಿ ಆಗುವ ಏರಿಳಿತಗಳನ್ನು ಪರಿಗಣಿಸಿದಾಗ ನೀವು ನಿಗದಿಪಡಿಸಿದ ಮೌಲ್ಯ ಅನುಪಾತಕ್ಕೆ ಸಾಲ (LTV) ಸಮಂಜಸವಾಗಿದೆ.

## ಶ್ರೀ ಬಸವೇಶ್ವರ ಕೋ–ಆಪರೇಟಿವ್ಹ ಬ್ಯಾಂಕಿನ 62ನೇ ವಾರ್ಷಿಕ ಮಹಾಸಭೆ



**ಬಸವನಬಾಗೇವಾಡಿ:** ನಗರದ ಶ್ರೀ ಬಸವೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್., ಬಸವನಬಾಗೇವಾಡಿ ಇದರ 62ನೇ ವಾರ್ಷಿಕ ಮಹಾಸಭೆಯು ದಿನಾಂಕ 22–08–2026ರಂದು ಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಜನಕಲ್ಯಾಣ ಭವನ ಹಿರೇಮಠ ಬಸವನ ಬಾಗೇವಾಡಿಯಲ್ಲಿ ಜರುಗಿತು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಲೋಕನಾಥ ಎನ್.ಅಗರವಾಲ ಇವರು ಮಾತನಾಡಿ ನಮ್ಮ ಬ್ಯಾಂಕು ರೂ. 3.73 ಕೋಟಿ ಶೇರು ಬಂಡವಾಳ, ರೂ. 10.68 ಕೋಟಿ ನಿಧಿ, ರೂ. 118.50 ಕೋಟಿ ಠೇವು, ರೂ. 73.72 ಕೋಟಿ ಸಾಲಗಳು, ರೂ. 138.06 ಕೋಟಿ ದುಡಿಯುವ ಬಂಡವಾಳ ಹೊಂದಿದೆ ಮತ್ತು ಎಲ್ಲ 4 ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಬಸವರಾಜ ಆಯ್. ಗೋಳಸಂಗಿ ಮಾತನಾಡಿ ಬ್ಯಾಂಕಿನ ಪ್ರಗತಿ ವಿವರಿಸಿದರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಿ.ಎಸ್. ತಳ್ಳೊಳ್ಳಿ ಇವರು 2025–26ನೇ ಸಾಲಿನ ವರದಿ ವಾಚನ ಮಂಡಿಸಿದರು. ಬ್ಯಾಂಕಿನ ನಿರ್ದೇಶಕರಾದ ಶ್ರೀ ಶಂಕರಗೌಡ ಎಸ್. ಬಿರಾದಾರ ಸ್ವಾಗತಿಸಿದರು. ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಆರ್. ಕಿಣಗಿ ವಂದಿಸಿದರು.

ನಿರ್ದೇಶಕರುಗಳಾದ ಶ್ರೀ ಉಮೇಶ ಸ. ಹಾರಿವಾಳ, ಶ್ರೀ ಅನೀಲ ಈ. ದುಂಬಾಳಿ, ಶ್ರೀ ಜಗದೀಶ ಬ.ಕೊಟ್ರಶೆಟ್ಟಿ, ಶ್ರೀ ಶ್ರೀಶೈಲ ಚ.ಪತ್ತಾರ, ಶ್ರೀ ಶಿವಾನಂದ ಬ. ಪಟ್ಟಣಶೆಟ್ಟಿ, ಶ್ರೀ ನೀಲಪ್ಪ ಖು. ನಾಯಕ, ಶ್ರೀಮತಿ ಕಮಲಾ ಲಿ. ತಿಪ್ಪನಗೌಡರ, ಶ್ರೀಮತಿ ಸುರೇಖಾ. ಈ. ಪಡಶೆಟ್ಟಿ, ಶ್ರೀ ಯಮನಪ್ಪಗೌಡ.ಕೃ.ಪಾಟೀಲ, ಶ್ರೀ ಭೀಮನಗೌಡ ಗು.ಬಿರಾದಾರ, ಶ್ರೀ ರಾಜಶೇಖರ ವೀ. ಗುತ್ತರಗಿ ಮಠ ಉಪಸ್ಥಿತರಿದ್ದರು. ಮತ್ತು ಮಾರಾಟಾಧಿಕಾರಿ ಶ್ರೀ ಆರ್.ಎನ್. ಚಿಕ್ಕೊಂಡ ನಿರೂಪಿಸಿದರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗ ಹಾಜರಿದ್ದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
ಕುತೂಹಲಕಾರಿಯಾದ ಸುದ್ದಿಗಳು ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಪಾರ್ಲಿ ಮೂಲದ ದಹಿಫಾಲೆ ಕುಟುಂಬದಲ್ಲಿ ಬರೋಬ್ಬರಿ 5 ತಲೆಮಾರುಗಳ ಸುದೀರ್ಘ ಕಾಯುವಿಕೆಯ ನಂತರ ಹೆಣ್ಣು ಮಗುವೊಂದು ಜನಿಸಿದ್ದು, ಶಿಶುವಿಗೆ ಗಾರ್ಗಿ ಎಂದು ಹೆಸರಿಡಲಾಗಿದೆ. ಮಗು ಹಾಗೂ ತಾಯಿ ಸೌಭಾಗ್ಯವತಿ ಕಲ್ಪನಾ ಋಷಿಕೇಶ್ ದಹಿಫಾಲೆ ಅವರನ್ನು ಹೂವುಗಳಿಂದ ಅಲಂಕರಿಸಿದ ರಥದಲ್ಲಿ ಕುಳ್ಳಿರಿಸಿ, ಡೊಳ್ಳು-ವಾದ್ಯಗಳ ನಿನಾದದೊಂದಿಗೆ ಮೆರವಣಿಗೆಯ ಮೂಲಕ ಮನೆಗೆ ಕರೆತರಲಾಯಿತು.
- ಮುಧೋಳ ಸಮೀಪದ ಮುಗಳಖೋಡ ಗ್ರಾಮದ ಶ್ರೀಕಾಂತ ಕುಂಬಾರ, ನೈಸರ್ಗಿಕ ಕೃಷಿ ಪದ್ಧತಿಯಲ್ಲಿ, ಎರಡು ಸಾಲು ಕಬ್ಬಿನ ನಡುವೆ ಐದು ಅಡಿ ಅಂತರ ಬಿಟ್ಟು, ಈ ಜಾಗದಲ್ಲಿ ಏಕದಳ, ದ್ವಿದಳ, ಎಣ್ಣೆಕಾಳು ಮತ್ತು ಸಾಂಬಾರ ಬೆಳೆಗಳನ್ನು ಅಂತರ ಬೆಳೆಯಾಗಿ ಜತೆಗೆ ಅರಿಶಿನ, ಸೆಣಬು, ದಯಂಚಾದಂತಹ ಹಸಿರೆಲೆ ಗೊಬ್ಬರದ ಬಿತ್ತನೆ ಮಾಡುತ್ತಾರೆ. ಇನ್ನೊಂದು ಕಡೆ ಹುಚ್ಚೆಳ್ಳು, ಸಾಸಿವೆ ಗಿಡಗಳು, ನಡುವೆ ಕೊತ್ತಂಬರಿ, ಮೆಂತ್ಯೆ, ಸಬ್ಬಸಿಗೆ ಸೊಪ್ಪಿನ ಮಡಿ, ಕುಸುಬೆ, ಶೇಂಗಾ, ಮೆಣಸಿನಕಾಯಿ ಬಹು ಬೆಳೆ ಪದ್ಧತಿಯ ಮೂಲಕ ಬಾರಿ ಆದಾಯ ಗಳಿಸುತ್ತಿದ್ದಾರೆ.
- ಕನ್ನಡಿಗರ ಸುದೀರ್ಘ ಮತ್ತು ನಿರಂತರ ಹೋರಾಟಕ್ಕೆ ಕೊನೆಗೂ ಐತಿಹಾಸಿಕ ಜಯ ಸಿಕ್ಕಿದೆ. ಬ್ಯಾಂಕಿಂಗ್ ವಲಯದಲ್ಲಿ ಸ್ಥಳೀಯ ಭಾಷೆ ಬಲ್ಲವರಿಗೇ ಆದ್ಯತೆ ನೀಡಿ ಉದ್ಯೋಗ ನೀಡಬೇಕು ಎಂಬ ಪ್ರಬಲ ಆಕಾಂಕ್ಷೆಗೆ ಪ್ರಮುಖ ರಾಷ್ಟ್ರೀಕೃತ ಬ್ಯಾಂಕ್ ಆದ ಬ್ಯಾಂಕ್ ಆಫ್ ಬರೋಡಾ ಈಗ ಅಧಿಕೃತವಾಗಿ ಮನ್ನಣೆ ನೀಡಿದೆ. ಇದು ಬ್ಯಾಂಕಿಂಗ್ ರಂಗದಲ್ಲಿ ಉದ್ಯೋಗ ಹುಡುಕುತ್ತಿರುವ ಕರ್ನಾಟಕ ಸೇರಿದಂತೆ ದೇಶದ 20 ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಥಳೀಯ ಯುವಕರಿಗೆ ದೊಡ್ಡ ಮಟ್ಟದ ಆಶಾಕಿರಣವಾಗಿದೆ.
- ವೈಸ್ ಮಾರ್ಷಲ್ ಶಕ್ತಿ ಶರ್ಮಾ ಅವರು ವಾಯುಪಡೆಯ ಶಿಕ್ಷಣ ವಿಭಾಗದ ಸಹಾಯಕ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇದರೊಂದಿಗೆ ಸಶಸ್ತ್ರ ಪಡೆಗಳ ವೈದ್ಯಕೀಯೇತರ ವಿಭಾಗದಿಂದ ಟು-ಸ್ಟಾರ್ ಹುದ್ದೆಗೆ ಏರಿದ ಮೊದಲ ಮಹಿಳಾ ಅಧಿಕಾರಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

## ಓದುಗರ ಅನಿಸಿಕೆ...



**ಕಡಿವಾಣ ಬೀಳಲಿದೆ :** ಗ್ರಾಹಕರ ಕೊಳ್ಳುವ ಉತ್ಪನ್ನಗಳ ಗುಣಮಟ್ಟ, ಶುದ್ಧತೆ, ಪ್ರಮಾಣೀಕರಣ ಹಾಗೂ ವಿತರಕರು ಮತ್ತು ಮಾರಾಟಗಾರರ ವಿವರಗಳನ್ನು ತಿಳಿಯುವ ಹಕ್ಕನ್ನು ಮಾನ್ಯ ಮಾಡುವಂತೆ ಕೋರಲಾದ ಸುಪ್ರೀಂ ಕೋರ್ಟ್ ವಿಚಾರಣೆ ನಡೆಯುತ್ತಿದೆ. ಗ್ರಾಹಕರನ್ನು ಶೋಷಣೆಯಿಂದ ರಕ್ಷಿಸಲು ಈ ಹಕ್ಕು ಅತ್ಯಂತ ಅಗತ್ಯವಾಗಿದ್ದು ಇದು ಜಾರಿಯಾದಲ್ಲಿ, ವ್ಯಾಪಾರಿಗಳ ವಂಚನೆಗೆ ಕಡಿವಾಣ ಬೀಳಲಿದೆ.

**ಉಮೇಶ ವೈ. ಪಾಟೀಲ, ಬಾಗಲಕೋಟೆ**

**ಗ್ರಾಹಕರು ವಿರೋಧಿಸಬೇಕಿದೆ :** ಎಸ್‌ಬಿಐ ಬ್ಯಾಂಕ್ ಗ್ರಾಹಕರು ಇನ್ನು ಮುಂದೆ ತಿಂಗಳಿಗೆ 4 ಬಾರಿಗಿಂತ ಹೆಚ್ಚು ಅಂದರೆ 5ನೇ ಬಾರಿ ಅಥವಾ ಅದಕ್ಕಿಂತ ಹೆಚ್ಚು ಬಾರಿ ನಗದು ಹಿಂಪಡೆದರೆ ಪ್ರತಿ ವಹಿವಾಟಿಗೆ ರೂ.15 ಜೊತೆಗೆ ಜಿಎಸ್‌ಟಿ ಶುಲ್ಕ ವಿಧಿಸಲಾಗುತ್ತದೆ ಎಂದು ಹೇಳಲಾಗಿದೆ. ಇದು ಯಾವುದೇ ರೀತಿಯಲ್ಲೂ ಸಮರ್ಥನೀಯವಲ್ಲ, ಇದನ್ನು ಎಲ್ಲ ಗ್ರಾಹಕರು ವಿರೋಧಿಸಬೇಕಿದೆ.

**ಎನ್. ಪ್ರಸಾದ್ ಮಲ್ಲಪ್ಪ, ದಾವಣಗೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.